**ಪ್ರತ್ರಿಕಾ ಪ್ರಕಟಣೆ: 24.05.2020**

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಮತ್ತು ಆಲ್ಟರ್ನೇಟಿವ್ ಲಾ ಫೋರಮ್**

ಕಾರ್ಖಾನೆಗಳಲ್ಲಿ ಕೆಲಸದಅವಧಿಯನ್ನು ವಾರಕ್ಕೆ 48 ರಿಂದ 60 ಗಂಟೆಗಳಿಗೆ ಏರಿಸಲುಅನುಮತಿ ನೀಡಿಆದೇಶ ಹೊರಡಿಸುವ ಮೂಲಕ, ಕರ್ನಾಟಕ ಸರ್ಕಾರವುಮಹಿಳಾ ಕಾರ್ಮಿಕರಿಗೆದೊಡ್ಡ ಹೊಡೆತ ನೀಡಿದೆ.ಮೇ 16 ರಿಂದ 18 ರ ವರೆಗಿನಅವಧಿಯಲ್ಲಿಆಲ್ಟರ್ನೇಟಿವ್ ಲಾ ಫೋರಮ್ ಹಾಗೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಸಂಸ್ಥೆಗಳು ಜಂಟಿಯಾಗಿ ನಡೆಸಿದ ಕಾರ್ಮಿಕರ ಸಮೀಕ್ಷೆಯಲ್ಲಿಇದು ಮತ್ತಷ್ಟುದೃಢಪಟ್ಟಿದೆ.ಸಮೀಕ್ಷೆಯ ಶೇ.65 ಕಾರ್ಮಿಕರುತಾವು ಕೆಲಸದಅವಧಿಯನ್ನು ಹೆಚ್ಚಿಸಿದರೆ ಕೆಲಸ ಮಾಡಲು ಮಾಡುವುದಿಲ್ಲ ಮತ್ತು ಮಾಡಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಹೆಚ್ಚಿನ ಮಹಿಳಾ ಕಾರ್ಮಿಕರೇ ಹೆಚ್ಚು ದುಡಿಯುತ್ತಿರುವಗಾರ್ಮೆಂಟ್ಸ್ಉದ್ಯಮದಲ್ಲಿ, ಈ ರೀತಿಯಆದೇಶದಿಂದಕಾರ್ಮಿಕರು ದಿನದಲ್ಲಿಅಥವಾ ವಾರದಲ್ಲಿ ಹೆಚ್ಚಿಸಿದ ಅವಧಿಗೆ ಕೆಲಸ ಮಾಡಲಾಗದೆ, ತಾವೇಕೆಲಸ ಬಿಡುವಅಥವಾ ಕೆಲಸ ಬಿಟ್ಟು ಹೋಗಿ ಎಂದು ಹೊರದಬ್ಬಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಾಗುತ್ತವೆ. ಸರ್ಕಾರದ ಈ ಆದೇಶವು ಮಹಿಳೆಯರ ಹಿತಾಸಕ್ತಿಯನ್ನು ಸಂಪೂರ್ಣ ಮರೆತಿದ್ದು, ಅವರಜೀವನೋಪಾಯದದಾರಿಯನ್ನೇ ಕಸಿದುಕೊಳ್ಳತ್ತದೆ. ಈ ರೀತಿಯ ಆದೇಶಗಳನ್ನು ಹೊರಡಿಸುತ್ತಾ, ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸುತ್ತಿರುವ ಸರ್ಕಾರವುತಾನು 'ಕಾರ್ಮಿಕ–ವಿರೋಧಿ' ಎಂದು ಪದೇ ಪದೇ ಸಾಬೀತು ಪಡಿಸುತ್ತಿದೆ.

**ಈ ಸಮೀಕ್ಷೆಯ ಬಗ್ಗೆ**

"ಕೋವಿಡ್–19 ಮಹಾಸೋಂಕು, ಲಾಕ್‌ಡೌನ್ ಹಾಗೂ ಗಾರ್ಮೆಂಟ್ಸ್ಕಾರ್ಮಿಕರು: ದಕ್ಷಿಣಕರ್ನಾಟಕದಒಂದು ವರದಿ" ಎಂದುಕರೆಯಲಾಗಿರುವ ಈ ವರದಿಯು, 2020 ರ ಮೇ 16 ರಿಂದ 18 ರಅವಧಿಯಲ್ಲಿ ಬೆಂಗಳೂರು, ರಾಮನಗರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ 82 ಗಾರ್ಮೆಂಟ್ಸ್ಕಾರ್ಮಿಕರೊಂದಿಗೆಫೋನ್ ಮೂಲಕ ನಡೆಸಿದ ಸಮೀಕ್ಷೆಯನ್ನು ಆಧರಿಸಿದೆ.ಲಾಕ್‌ಡೌನ್‌ಗಿಂತ ಮೊದಲಿದ್ದ ಕೆಲಸದ ಪರಿಸ್ಥಿತಿ, ಲಾಕ್‌ಡೌನ್‌ನಿಂದಾದ ಪರಿಣಾಮ, ಈ ಅವಧಿಯಲ್ಲಿಅವರು ಅನುಭವಿಸಿದ ಭಾವನಾತ್ಮಕ ಹಾಗೂ ವಾಸ್ತವತೆಯ ಒತ್ತಡಗಳು ಮುಂತಾದುವುಗಳ ಕುರಿತು ಈ ವರದಿಯು ಹೇಳುತ್ತದೆ.ಸರ್ಕಾರ ಮತ್ತು ಮಾಲೀಕರುಕಾರ್ಮಿಕರನ್ನು ಹೇಗೆ ನಿರ್ಲಕ್ಷಿಸಿದರು ಮತ್ತು ಲಾಕ್‌ಡೌನ್ ನಂತರಕಾರ್ಮಿಕರಿಗೆಒದಗಿಸಬೇಕಾದ ಅವಶ್ಯಕತೆಗಳನ್ನು ಕುರಿತು ವರದಿಯು ವಿಶ್ಲೇಷಿಸುತ್ತದೆ.

**ವರದಿಯ ಮುಖ್ಯ ಫಲಿತಗಳು**

1. 2020 ರಏಪ್ರಿಲ್ ತಿಂಗಳ ವೇತನ ಈ ಕಾರ್ಮಿಕರಿಗೆದೊರೆತಿಲ್ಲ. ಶೇ 17 ರಷ್ಟುಕಾರ್ಮಿಕರುತಮಗೆಏಪ್ರಿಲ್ ತಿಂಗಳ 50% ವೇತನ ಮಾತ್ರ ಸಿಕ್ಕಿದೆ ಎಂದು ಹೇಳಿದರು.
2. ಮೇ ತಿಂಗಳಲ್ಲಿ ಕಾರ್ಖಾನೆಗಳು ತೆರೆದಾಗಯಾರು ಕೆಲಸ ಮಾಡಿದ್ದರೋಅವರಿಗೆ ಮಾತ್ರ ಪೂರ್ತಿಅಥವಾ ಸ್ವಲ್ಪ ಭಾಗಏಪ್ರಿಲ್ ತಿಂಗಳ ವೇತನದೊರಕಿದೆಎಂದು ಬಹುತೇಕಕಾರ್ಮಿಕರು ಹೇಳಿದರು. ಆ ಸಮಯದಲ್ಲಿ ಕೆಲಸಕ್ಕೆ ಹೋದಕಾರ್ಮಿಕರುಅಸುರಕ್ಷಿತವಾಗಿಅಥವಾದುಬಾರಿದರ ಪಾವತಿಸಿ ಕಾರ್ಖಾನೆಗೆ ಪ್ರಯಾಣಿಸುತ್ತಿದ್ದರು.
3. ಲಾಕ್‌ಡೌನ್ ಸಂದರ್ಭದಲ್ಲಿ ಊಟ ಕೊಡುವುದಾಗಲೀ, ರೇಶನ್‌ಕೊಡುವುದಾಗಲೀ, ಮುಂಗಡ ಹಣಕೊಡುವುದಾಗಲೀ, ಸಾಲ ನೀಡುವುದಾಗಲೀಯಾವುದೇರೀತಿಯಲ್ಲಿಯೂಮಾಲೀಕರುತಮಗೆ ನೆರವಾಗಲಿಲ್ಲ ಎಂದು96% ನಷ್ಟು ಕಾರ್ಮಿಕರು ಹೇಳಿದರು.

4. ಕಾರ್ಮಿಕರಿಗೆ ಸರ್ಕಾರವುಏನನ್ನೂ ಮಾಡಲಿಲ್ಲ ಎಂದು 60% ಕಾರ್ಮಿಕರು ಹೇಳಿದರು. 75% ರಷ್ಟುಕಾರ್ಮಿಕರುತಮಗೆಯಾವಉಚಿತಆಹಾರವೂದೊರಕಲಿಲ್ಲ ಎಂದೂ, 55% ಕಾರ್ಮಿಕರುತಮಗೆಉಚಿತರೇಶನ್‌ಕೊಟ್ಟಿಲ್ಲಎಂದೂ, 66% ಜನರುಆಹಾರಇಲಾಖೆಯಿಂದ ಸಿಗುವ ರಿಯಾಯತಿದರದ ಪಡಿತರವೂಸಿಗಲಿಲ್ಲ ಎಂದೂ, 18% ಜನರು ಸರ್ಕಾರದಿಂದಯಾವುದೇ ಸಹಾಯವೂದೊರಕಲಿಲ್ಲ ಎಂದು ಸಮೀಕ್ಷೆಯಲ್ಲಿ ಹಂಚಿಕೊಂಡರು.

5. ಮಾಲೀಕರುವೇತನ ಪಾವತಿಸಲಿಲ್ಲ, ಸರ್ಕಾರವುಊಟವನ್ನಾಗಲೀ, ರೇಶನ್ ಆಗಲೀ ನೀಡಲಿಲ್ಲ, ಇದರಿಂದ ಹತಾಶಗೊಂಡಕಾರ್ಮಿಕರು ಹಣವನ್ನು ಸಾಲ ಪಡೆಯುವ ಮೂಲಕ ಹೊಂದಿಸಿಕೊಂಡರು. **45% ಕಾರ್ಮಿಕರುಅಕ್ಕಪಕ್ಕದ ಮನೆಯವರಿಂದ, ಗೆಳೆಯ/ಗೆಳತಿಯರಿಂದ ಮತ್ತು ನೆಂಟರಿಂದ ಹಣವನ್ನುಸಾಲ ಪಡೆದುಕೊಂಡೆವುಎಂದು ಹೇಳಿದರು.**

6. **68% ಕಾರ್ಮಿಕರು ಲಾಕ್‌ಡೌನ್‌ಅವಧಿಗೆತಾವು ಮನೆ ಬಾಡಿಗೆಕಟ್ಟಿಲ್ಲಎಂದು** ಹೇಳಿದ್ದಾರೆ. **32% ಕಾರ್ಮಿಕರುಕಾರ್ಮಿಕರು ಸಾಲ ಮಾಡಿ, ಅಥವಾತಮ್ಮ ಉಳಿತಾಯದ ದುಡ್ಡಿನಿಂದಅಥವಾತಮಗೆ ಸಿಕ್ಕಿದ ಅರ್ಧ ವೇತನದಿಂದಲೇ ಬಾಡಿಗೆಕಟ್ಟಿದ್ದಾರೆ.**

7. ಲಾಕ್‌ಡೌನ್ ಮಧ್ಯದಲ್ಲಿಯೇ ಕಾರ್ಖಾನೆಗಳು ಕೆಲಸ ನಿರ್ವಹಿಸಲು ಅನುಮತಿ ನೀಡಿ, ತಾನುಕಾರ್ಮಿಕರ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ವಹಿಸಿದ್ದೇನೆ ಎಂದು ಸರ್ಕಾರವು ಮತ್ತೊಮ್ಮೆ ಸಾಬೀತು ಮಾಡಿತು. **ಕಾರ್ಖಾನೆಗಳಿಗೆ ಕಾರ್ಮಿಕರು ಹೋಗಿಬರಲು ಸರ್ಕಾರವುಯಾವುದೇ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಮಾಡಲಿಲ್ಲ**. ಸಮೀಕ್ಷೆಯ ಸಮಯದಲ್ಲಿ, ಕಾರ್ಖಾನೆಗೆತಾವು ಹೋಗಲಾಗುತ್ತಿಲ್ಲಎಂದುಕಾರ್ಮಿಕರುತಮ್ಮಆತಂಕತೋಡಿಕೊಂಡರು. ಕಾರ್ಖಾನೆ ನಡೆಯುತ್ತಿದ್ದು, ತಮ್ಮ ಸಹೋದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ, ಆದರೆತಾವು ಹೋಗಲು ಆಗದಿರುವುದರಿಂದತಮ್ಮ ಕೆಲಸ ಉಳಿಯುವುದೋ ಇಲ್ಲವೋಎಂದುಕಾರ್ಮಿಕರುಅತ್ಯಂತಆತಂಕಿತರಾಗಿದ್ದರು. ಒಂದು ವೇಳೆ ಮಾಲೀಕರು ಲಾಕ್‌ಡೌನ್ ನಂತರ, ಕಾರ್ಮಿಕರನ್ನು ಕೆಲಸದಿಂದತೆಗೆಯಲು ಶುರುಮಾಡಿದರೇತಮ್ಮನ್ನೇ ಮೊದಲುತೆಗೆದುಹಾಕುವುದುಎಂದುಅವರು ಭಯದಿಂದ ಹೇಳಿದರು.

8. ಕಾರ್ಖಾನೆಯುಕಾರ್ಯನಿರ್ವಹಿಸುತ್ತಿದ್ದರೂ, ಸಾರ್ವಜನಿಕ ಸಾರಿಗೆಯಿಲ್ಲದೆತಾವು ಹೋಗಲಾಗುತ್ತಿಲ್ಲ ಎಂಬ ಆತಂಕದೊಂದಿಗೆ, ಯಾರು ಹೋಗುತ್ತಿದ್ದಾರೋಅವರಿಗೆ ಪೂರ್ತಿಅಥವಾ ಸ್ವಲ್ಪ ಭಾಗ ವೇತನದೊರಕಿರುವುದೂ ಸಹ ಈ ಕಾರ್ಮಿಕರಆತಂಕಕ್ಕೆಕಾರಣವಾಗಿದೆ. ಸ್ವಲ್ಪ ಹಣವಾದರೂದೊರಕುತ್ತದೆ ಎಂಬ ಕಾರಣಕ್ಕೆ ಹೇಗಾದರೂ ಕೆಲಸಕ್ಕೆ ಹೋಗಬೇಕು ಎಂದುಅವರುಕಾಯುತ್ತಿದ್ದಾರೆ.

9. ಕೆಲಸ ಕಳೆದುಕೊಳ್ಳುವ ಭಯದಲ್ಲಿಕಾರ್ಮಿಕರು ಕೆಲಸಕ್ಕೆ ನಡೆದೇ ಹೋಗುತ್ತಿದ್ದಾರೆ, ರಸ್ತೆಯಲ್ಲಿ ಹೋಗುವ ವಾಹನ ಸವಾರರನ್ನುತಮ್ಮನ್ನು ಬಿಡುವಂತೆ ಕೇಳಿಕೊಳ್ಳುತ್ತಿದ್ದಾರೆ, ದುಬಾರಿದರಕೊಟ್ಟು ವ್ಯಾನ್‌ಗಳಲ್ಲಿ ಕಾರ್ಖಾನೆತಲುಪುತ್ತಿದ್ದಾರೆ. ಬೆಂಗಳೂರಿನಿಂದ ಹೊರಗಿನ ಜಿಲ್ಲೆಗಳಲ್ಲಿ ಕಾರ್ಮಿಕರುತಾವುಅಸುರಕ್ಷಿತವಾಗಿ ಪ್ರಯಾಣಿಸುತ್ತಿದ್ದೇವೆಂದು ಹೇಳಿದರು.

10. ಕರ್ನಾಟಕ ಸರ್ಕಾರವು ಕೆಲಸದ ಗಂಟೆಗಳ ಬಗ್ಗೆ ಆದೇಶ ಹೊರಡಿಸುವುದಕ್ಕೂ ಮುನ್ನ ಈ ಸಮೀಕ್ಷೆ ನಡೆಸಲಾಗಿದ್ದರೂ ಸರ್ಕಾರವುಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸುವ

ತೂಗುಕತ್ತಿಯುತೂಗುತ್ತಲೇಇದ್ದುದರಿಂದ, ವೇತನ ಹೆಚ್ಚಿಸದೆಇಎಸ್.ಐ, ಪಿಎಫ್ಇಲ್ಲದೆ ಕೆಲಸದ ಗಂಟೆಗಳನ್ನು ಹೆಚ್ಚಿಸಿದರೆ ನೀವು ಕೆಲಸ ಮಾಡುತ್ತೀರಾಎಂದುಕಾರ್ಮಿಕರನ್ನು ಪ್ರಶ್ನಿಸಲಾಗಿತ್ತು.

- **66% ಕಾರ್ಮಿಕರು ವೇತನ ನೀಡದೆ ಹೆಚ್ಚು ಅವಧಿಗೆತಾವು ಕೆಲಸ ಮಾಡುವುದಿಲ್ಲ ಎಂದು ಹೇಳಿದರು.**
- **65% ಕಾರ್ಮಿಕರುತಾವು ಕೆಲಸದಅವಧಿಯನ್ನು ಹೆಚ್ಚಿಸಿದರೆ ಕೆಲಸ ಮಾಡುವುದಿಲ್ಲ ಎಂದು ಹೇಳಿದರು.**
- **75% ಕಾರ್ಮಿಕರುಇ.ಎಸ್.ಐ ಸೌಲಭ್ಯವನ್ನು ಹಿಂತೆಗೆದುಕೊಂಡರೆತಾವು ಕೆಲಸ ಮಾಡುವುದಿಲ್ಲ ಎಂದು ಹೇಳಿದರು.**
- **82% ಕಾರ್ಮಿಕರು ಪಿ.ಎಫ್ ಸೌಲಭ್ಯವನ್ನು ನಿಲ್ಲಿಸಿದಲ್ಲಿ ತಾವು ಕೆಲಸ ಮಾಡುವುದಿಲ್ಲ ಎಂದು ಹೇಳಿದರು.**

11. ಕಳೆದ ಎರಡು ತಿಂಗಳಲ್ಲಿ ಊಟವಿಲ್ಲದೆ, ಆದಾಯವಿಲ್ಲದೆ ಮತ್ತುಯಾವುದೇ ನೆರವೂಇಲ್ಲದೆ ಈ ಕಾರ್ಮಿಕರುಅತ್ಯಂತ ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಪಿ.ಎಫ್, ಇಎಸ್ಐಇಲ್ಲದಿದ್ದರೂ ಕೆಲಸ ಮಾಡುತ್ತೇವೆಎಂದು ಹೇಳಿದ ಕಾರ್ಮಿಕರು ಕೆಲಸ ಮಾಡಲೇ ಬೇಕಾದ ಅನಿವಾರ್ಯತೆಯಲ್ಲಿದ್ದಾರೆ. ಕುಟುಂಬದಇತರ ಸದಸ್ಯರಿಗೆ ಕೆಲಸವಿಲ್ಲದಿರುವುದರಿಂದ, ಬಾಡಿಗೆಕಟ್ಟಲು, ಕರೆಂಟ್ ಬಿಲ್ ಕಟ್ಟಲು, ಸಾಲ ತೀರಿಸಲು, ಬಡ್ಡಿಕಟ್ಟಲುಅವರು ಕೆಲಸ ಮಾಡಲೇ ಬೇಕಾಗಿದೆ.
12. ಕಾರ್ಖಾನೆಗೆ ಪ್ರಯಾಣಿಸುವಾಗ, ಅಥವಾ ಕೆಲಸದ ಸ್ಥಳದಲ್ಲಿ ತಮಗೆ ಸೋಂಕು ತಗುಲಬಹುದು ಎಂಬ ಭೀತಿಕಾರ್ಮಿಕರಿಗಿದೆ. ತಮ್ಮಿಂದತಮ್ಮಕುಟುಂಬದಇತರ ಸದಸ್ಯರಿಗೂ ಸೋಂಕು ಹರಡಬಹುದು ಎಂಬ ಆತಂಕವೂಇದೆ.

**ಶಿಫಾರಸುಗಳು**

1. ವೇತನ ಪಾವತಿ ಮತ್ತು ಕೆಲಸದ ಪರಿಸ್ಥಿತಿಗೆ ಸಂಬಂಧಿಸಿದಂತೆ ಸಕಾರವುತಕ್ಷಣವೇಕಾರ್ಮಿಕರಿಗಾಗಿ ಸಹಾಯವಾಣಿಯನ್ನುತೆರೆಯಬೇಕು. ಏಪ್ರಿಲ್ ತಿಂಗಳ ವೇತನ ಸಿಕ್ಕಿಲ್ಲದಿರುವುದರಿಂದ ಜೀವನ ಹೇಗೆ ನಡೆಸುವುದು ಎಂಬ ಆತಂಕವುಕಾರ್ಮಿಕರನ್ನುಕಾಡುತ್ತಿದೆಎಂದು ಈ ಸಮೀಕ್ಷೆಯಲ್ಲಿಕಂಡುಬಂದಿದೆ. 70% ಕಾರ್ಮಿಕರಿಗೆ ವೇತನ ಸಿಕ್ಕಿಲ್ಲದೇ ಇರುವುದರಿಂದ ಈ ಸಮಸ್ಯೆಯನ್ನು ಪರಿಹರಿಸಲು ಸಹಾಯವಾಣಿಯುತಕ್ಷಣವೇಕ್ರಮ ಕೈಗೊಳ್ಳಬೇಕು.
2. ಕೇಂದ್ರಸರ್ಕಾರದ ಗೃಹ ಸಚಿವಾಲಯದಆದೇಶದಂತೆ **(MHA order)** 2020 ರ ಮೇ 18 ರ ವರೆಗಿನ ಲಾಕ್‌ಡೌನ್ಅವಧಿಗೆ**ಕಾರ್ಮಿಕರಿಗೆ ಪೂರ್ತಿ ವೇತನ ಸಿಗುವಂತೆ** ಸರ್ಕಾರವು ಖಾತ್ರಿಪಡಿಸಿಕೊಳ್ಳಬೇಕು.
3. ಗಾರ್ಮೆಂಟ್ಸ್ಕಾರ್ಮಿಕರ ವೇತನ, ಕೆಲಸದ ಗಂಟೆಗಳು, ಕೆಲಸದ ಪರಿಸ್ಥಿತಿ, ಪ್ರಯಾಣದ ವ್ಯವಸ್ಥೆ ಮುಂತಾದುವುಗಳ ಬಗ್ಗೆ ಚರ್ಚಿಸಲು ಸರ್ಕಾರವು**ಗಾರ್ಮೆಂಟ್ಸ್ಕಾರ್ಮಿಕರ ಯೂನಿಯನ್‌ಗಳನ್ನು ತಕ್ಷಣವೇ ಸಭೆಕರೆಯಬೇಕು.**
4. ಲಾಕ್‌ಡೌನ್ ನಂತರದ ಸಂದರ್ಭದಲ್ಲಿ ಕಾರ್ಖಾನೆಗಳನೇದರೂ ಮುಚ್ಚಿದಲ್ಲಿಕಾರ್ಮಿಕರಿಗಾಗುವ ತೊಂದರೆಗಳನ್ನು ಪರಿಹರಿಸಲು ಸರ್ಕಾರವು ವ್ಯವಸ್ಥೆ ಸೃಷ್ಟಿಸಬೇಕು. ವೇತನ ಪಾವತಿ, ಬಾಕಿ ಮೊತ್ತ, ಮತ್ತುಇತರ ಪರಿಹಾರ ಮೊತ್ತಗಳು ಕಾರ್ಮಿಕರಿಗೆ ಸಿಗುವ ಹಾಗೆ ಆ ವ್ಯವಸ್ಥೆಯು ನೋಡಿಕೊಳ್ಳಬೇಕು.

5. ಕಾರ್ಮಿಕರಿಗೆತಾತ್ಕಾಲಿಕ ಕೆಲಸ ನಷ್ಟವಾಗಿದ್ದರೆ, ಅಥವಾ ಮುಂದೆಆಗುವುದಾದರೆ, ಅಂತಹವರನ್ನು ಗುರುತಿಸಿ, ಅವರಿಗೆಆರೋಗ್ಯ ವಿಮೆ, ಸಾರ್ವಜನಿಕಆಹಾರ ವಿತರಣೆಯಂತಹ ಸಾಮಾಜಿಕ ಭದ್ರತೆಯನ್ನುಒದಗಿಸಬೇಕು ಮತ್ತುಆದಾಯ ನೆರವು ನೀಡಬೇಕು.

6. ರಜೆಯ ದಿನ ಮತ್ತು ಭಾನುವಾರಗಳಂದು ಕೆಲಸ ಮಾಡುವಂತೆಒತ್ತಾಯ ಮಾಡಬಾರದುಎಂದು ಮತ್ತು ಹೆಚ್ಚುವರಿ ಕೆಲಸದಅವಧಿಗೆ ವೇತನ ಪಾವತಿಸಬೇಕುಎಂದುಗಾರ್ಮೆಂಟ್ಸ್ ಮಾಲೀಕರಿಗೆ ಸರ್ಕಾರವು ನಿರ್ದೇಶನ ನೀಡಬೇಕು.

7. ಕೆಲಸದಅವಧಿಗೆ ಸಂಬಂಧ ಪಟ್ಟಂತೆ, **ಕಾರ್ಖಾನೆಕಾಯಿದೆಯ ಕೆಲ ಸೆಕ್ಷನ್‌ಗಳಿಗೆ ವಿನಾಯತಿ ನೀಡಿ ಹೊರಡಿಸಿರುವ ಆದೇಶವನ್ನು ಹಿಂದೆಗೆದುಕೊಳ್ಳಬೇಕು.**

8. ಕಾರ್ಮಿಕರುಕಾರ್ಖಾನೆಗೆ ಹೋಗಿ ಬರಲು ಅನುಕೂಲವಾಗುವಂತೆBMTC, KSRTC ಗಳು ರಿಯಾಯತಿದರದಲ್ಲಿ ಸೇವೆ ನೀಡಬೇಕು. ಸಾಧ್ಯವಾದಕಡೆಯಲ್ಲಿ ಮಾಲೀಕರುಕಾರ್ಮಿಕರಿಗೆಉಚಿತ ಸಾರಿಗೆ ವ್ಯವಸ್ಥೆ ಮಾಡಬೇಕು.

9. ಗಾರ್ಮೆಂಟ್ಸ್‌ಕಾರ್ಮಿಕರಿಗೆ ಮತ್ತುಅವರಕುಟುಂಬಕ್ಕೆ**ಆರೋಗ್ಯ ಶಿಬಿರಗಳನ್ನು**ಆಯೋಜಿಸಬೇಕು.

10. ಸುರಕ್ಷತಾ ನಿಯಮಗಳು ಮತ್ತುಸಾಮಾಜಿಕ ಅಂತರಗಳು ಪಾಲನೆಯಾಗುತ್ತಿದೆಯೇಎಂಬುದನ್ನು ಖಚಿತಪಡಿಸಿಕೊಳ್ಳಲು **'ಫ್ಯಾಕ್ಟರಿಗಳನ್ನು ನಿಯಮಿತ ತನಿಖೆಗಳಿಗೆ"** ಗೆ ಒಳಪಡಿಸಬೇಕು.

11. **ಸಣ್ಣಹಣಕಾಸು ಸಂಸ್ಥೆಗಳು ಮತ್ತುಇತರ ಸಾಲ ನೀಡುವ ಸಂಸ್ಥೆಗಳು ಕಾರ್ಮಿಕರಿಗೆ ನೀಡುವ ಕಿರುಕುಳವನ್ನು ತಪ್ಪಿಸಲು ಅವುಗಳನ್ನು ನಿಷೇಧಿಸಬೇಕು**. ಈಗಾಗಲೇ ಆದಾಯವಿಲ್ಲದೆ, ಕೆಲಸ ಅಭದ್ರತೆಯಿಂದ ಸಂಕಷ್ಟಕ್ಕೊಳಗಾಗಿರುವ ಕಾರ್ಮಿಕರನ್ನು ಈ ಸಂಸ್ಥೆಗಳು ಮತ್ತಷ್ಟು ಭಯಪಡಿಸದಂತೆ ನೋಡಿಕೊಳ್ಳಬೇಕು.

12. ಗಾರ್ಮೆಂಟ್ಸ್‌ಕಾರ್ಮಿಕರಮಕ್ಕಳ **ಸ್ಕೂಲ್ ಫೀಸ್‌ಅನ್ನು ಮನ್ನಾ** ಮಾಡಬೇಕು. .

13. **ಗಾರ್ಮೆಂಟ್ಸ್‌ಕಾರ್ಮಿಕರರೋಗನಿರೋಧಕ ಶಕ್ತಿ ಹೆಚ್ಚಲು ಸಹಾಯವಾಗುವಂತೆ,**ಅವರಿಗೆರಿಯಾಯಿತಿದರದಲ್ಲಿತರಕಾರಿ, ಮಾಂಸ ಮೊಟ್ಟೆಗಳನ್ನು ವಿತರಿಸಬೇಕು.

**ಹೆಚ್ಚಿನ ಮಾಹಿತಿಗೆದಯವಿಟ್ಟು ಈ ಸಂಖ್ಯೆಗಳಿಗೆ ಕರೆ ಮಾಡಿ: ಪ್ರತಿಭಾಆರ್:***ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ*– 9945294865 ;**ಸ್ವಾತಿ ಶಿವಾನಂದ್:***ಆಲ್ಟರ್‌ನೇಟಿವ್ ಲಾ ಫೋರಂ* – 9632082103